**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.18/2021**

**ಚಾಸಾ-3/ಪಿಡಬ್ಲೂ-4**

| | |
|---|---|
| **ಹೆಸರು** | ಮಹಿಬೂಬ ಪಟೇಲ |
| **ತಂದೆ ಹೆಸರು** | ಸೊಂದು |
| **ವಯಸ್ಸು** | 41 ವರ್ಷಗಳು |
| **ಉದ್ಯೋಗ** | ಅಬಕಾರಿ ಮುಖ್ಯ ಪೇದೆ |
| **ವಾಸ ಸ್ಥಳ** | ಸೇಡಂ |

**ದಿನಾಂಕ 19.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

2018 ರಿಂದ 2023 ರವರೆಗೆ ಅಬಕಾರಿ ಪೇದೆಯಾಗಿ ಜೇವರ್ಗಿ ಅಬಕಾರಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19-03-2020 ರಂದು ಮಧ್ಯಾಹ್ನ 3.15 ಗಂಟೆಯ ಸಮಯದಲ್ಲಿ ನಾನು, ಚಾಸಾ-2 ರವರು ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಅಂಕಲಗಾ ತಾಂಡದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ನಮಗೆ ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ನನಗೆ ಮತ್ತು ಚಾಸಾ-3 ರವರು ಸ್ಥಳಕ್ಕೆ ಬರುವಂತೆ ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ-2 ರವರು ಸೇರಿ ಗುನ್ನೆ ಜಾಗವಾದ ಅಂಕಲಗಾ ತಾಂಡಾದ ಸೇವಾಲಾಲ ಗುಡಿಯ ಹತ್ತಿರ ಹೋಗಿರುತ್ತೇವೆ. ನಂತರ ಚಾಸಾ-1 ರವರು ಸಾರ್ವಜನಿಕರನ್ನು ಪಂಚರಾಗಿ ಬರುವಂತೆ ಕೋರಲಾಗಿ ಯಾರು ಸಹ ಸಹಕಾರ ಮಾಡಿರುವುದಿಲ್ಲ. ಆದ್ದರಿಂದ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-2 ಪಂಚರನ್ನಾಗಿ ಮಾಡಿಕೊಂಡು ಸ್ಥಳಕ್ಕೆ ಹೋಗುತ್ತಿದ್ದಾಗ ಒಂದು ಮನೆಯಿಂದ ಒಬ್ಬ ಮಹಿಳೆ ಓಡಿ ಹೋದಳು. ನಂತರ ಚಾಸಾ-1 ರವರು ಸ್ಥಳದಲ್ಲಿ ಶೋಧನಾ ಪತ್ರ ತಯಾರು ಮಾಡಿಕೊಂಡು ಮನೆಯನ್ನು ಶೋಧಿಸಲಾಗಿ. ಸದರಿ ಮನೆಯ ಬಾಗಿಲಿನ ಹಿಂದುಗಡೆ ಒಂದು ಬಿಳಿ ಚೀಲದಲ್ಲಿ ಅದರಲ್ಲಿ 90ಎಮ್.ಎಲ್.ನ 96 ಓರಿಜಿನಲ್ ಚಾಯ್ಸ ಪೌಚಗಳಿದ್ದವು, 180 ಎಮ್.ಎಲ್.ನ 09 ಐಬಿ ಬಾಟಲಿಗಳು, 330 ಎಂ ಎಲ್ ಅಳತೆಯ ಕಿಂಗ್ ಫಿಶರ್ 19 ಬೀರ ಕ್ಯಾನಗಳು ಇದ್ದವು. ಸ್ಥಳದಲ್ಲದ್ದ ಜನರನ್ನು ವಿಚಾರಿಸಲಾಗಿ ಸದರಿ ಮನೆಯ ಗಂಗುಬಾಯಿ ಗಂಡ ಮಾದು ಚವಾಣ ಎಂದು ಗೊತ್ತಾಯಿತು. ಅವುಗಳ ಪೈಕಿ ಎರಡು ಓಸಿ ಪೌಚಗಳು, ಒಂದು ಐಬಿ ಬಾಟಲ ಹಾಗೂ ಎರಡು ಕಿಂಗ್ ಫಿಶರ್ ಕ್ಯಾನಗಳು ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲಾಗಿ ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ ಸಿಲ್ ಮಾಡಲಾಯಿತು. ನಂತರ ಚಾಸಾ-1 ರವರು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ 03-20 ರಿಂದ 04-00 ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಲಾಯಿತು. ನಂತರ ಕಛೇರಿಗೆ

ಬಂದು ಪ್ರಕರಣ ದಾಖಲು ಮಾಡಲಾಯಿತು. ಪಂಚನಾಮೆಯನ್ನು ಈಗಾಗಲೆ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿನಾಂಕ 25.04.2020 ರಂದು ಚಾಸಾ-7 ರವರು ನನ್ನನ್ನು ಆರೋಪಿ ಪತ್ತೆ ಕುರಿತು ನೇಮಿಸಿರುತ್ತಾರೆ. ಸದರಿ ಪತ್ರವನ್ನು ನಿಪಿ-12 ಎಂದು ಗುರುತಿಸಲಾಯಿತು. ದಿನಾಂಕ 27.04.2020 ರಂದು ಆರೋಪಿ ಪತ್ತೆಯಾಗದ ಕುರಿತು ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿನಾಂಕ 30.07.2020 ರಂದು ಆರೋಪಿ ಪತ್ತೆಯಾಗದ ಕುರಿತು ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಈಗ ನ್ಯಾಯಾಲಯದ ಮುಂದೆ ಇರುವ ಎರಡು ಓಸಿ ಪೌಚಗಳು, ಒಂದು ಐಬಿ ಬಾಟಲ ಹಾಗೂ ಎರಡು ಕಿಂಗ್ ಫಿಶರ್ ಕ್ಯಾನಗಳು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಚಾಸಾ-1 ರವರು ನನಗೆ ಕರೆ ಮಾಡಿದಾಗ ನಾನು ಬೇಲೂರು ಗ್ರಾಮದಲ್ಲಿದ್ದೆ. ಚಾಸಾ-1 ರವರು ಮೊದಲೆ ಗುನ್ನೆ ಜಾಗಕ್ಕೆ ಬಂದಿದ್ದರು. ಅಂಕಲಗಿಗೆ ಹೋಗಬೇಕಾದರೆ ಬೇಲೂರ ಮುಖಾಂತರವೆ ಹೋಗಬೇಕಾಗುತ್ತದೆ ಎಂದರೆ ಸರಿ. ಚಾಸಾ-1 ಗುನ್ನೆ ಜಾಗಕ್ಕೆ ಬೇಲೂರ ಮುಖಾಂತರ ಹೋಗಿದ್ದು ಆ ಸಮಯದಲ್ಲಿ ನಾನು ಬೇಲೂರಿನಲ್ಲಿದ್ದೆ ಎಂದರೆ ಸಾಕ್ಷಿ ಬೇಲೂರ ಊರ ಒಳಗಡೆ ಇದ್ದೆ. ಚಾಸಾ-1 ರವರು ಪಂಚರಾಗಲು ನಮಗೆ ಯಾವುದೆ ನೋಟಿಸು ನೀಡಿಲ್ಲ. ಘಟನೆ ದಿನ ನಾನು ಆರೋಪಿಯನ್ನು ನೋಡಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ಓಡಿ ಹೋಗಿರುತ್ತಾಳೆ. ಆರೋಪಿ ಮಹಿಳೆ ಇದ್ದರಿಂದ ಅವರನ್ನು ಹಿಡಿಯಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಆರೋಪಿ ಮಹಿಳೆಯಿದ್ದರಿಂದ ಹಿಡಿಯಲು ಪ್ರಯತ್ನಿಸಿಲ್ಲ. ಆರೋಪಿಯ ಮನೆ ಎರಡು ಕೋಣೆಗಳಿದ್ದು ಹೊರಗಿನ ಕೋಣೆಯ ಬಾಗಿಲ ಹಿಂದುಗಡೆ ಮದ್ಯ ದೊರೆತವು. ಮದ್ಯ ತುಂಬಿದ ಪ್ಲಾಸ್ಟಿಕ ಚೀಲದ ಕಂಪನಿಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಯ ಮನೆಯಲ್ಲಿ ಇನ್ನಿಷ್ಟು ಚೀಲಗಳಿದ್ದವು ನಾನು ಎಲ್ಲಾ ಚೀಲಗಳನ್ನು ಪರಿಶೀಲಿಸಿರುತ್ತೇವೆ. ವಶಪಡಿಸಿಕೊಂಡ ಮದ್ಯ ಡಬ್ಬಿಗಳು ಯಾವ ಆಕಾರ, ಬಣ್ಣ ಮತ್ತು ಉದ್ದಗಲಗಳ ಬಗ್ಗೆ ನನಗೆ ಹೇಳಲಾಗುವುದಿಲ್ಲ. ವಶಪಡಿಸಿಕೊಂಡ ಬೀರ್ ಟಿನ್ನಗಳು ಕೆಂಪು ಬಣ್ಣದ್ದಾಗಿದ್ದವು. ಆರೋಪಿ ಮನೆಗೆ ಹೊಂದಿಕೊಂಡು ಬೇರೆ ಬೇರೆ ಮನೆಗಳಿರುತ್ತವೆ. ಸದರಿ ಮನೆ ಜೇವರ್ಗಿ-ಗಾಣಗಾಪೂರ ಮುಖ್ಯ ರಸ್ತೆಯಿದ್ದು ಮತ್ತು ಅಲ್ಲಿ ಸೇವಾಲಾಲ ಗುಡಿಯಿದ್ದು ಅಲ್ಲಿ ಬಹಳಷ್ಟು ಜನರು ಇರುತ್ತಾರೆ. ಗುನ್ನೆ ಜಾಗದ ಚೆಕಬಂದಿ ಸಾಕ್ಷಿ ಸರಿಯಾಗಿ ಹೇಳಿರುತ್ತಾರೆ. ಗುನ್ನೆ ಜಾಗದ ಮನೆಯ ಉದ್ದಗಲಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಶೀಲ ಮಾಡಿ ಶೀಲ ನಂಬರ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯಲ್ಲಿ ಶೀಲ್ ನಂಬರ ಬರೆದಿಲ್ಲ ಎಂದರೆ ಸರಿ. ನಾನು ಆರೋಪಿ

ಮನೆಯಲ್ಲಿದ್ದರೂ ಸಹ ಅವರನ್ನು ಯಾಕೆ ಬಂಧಿಸಿಲ್ಲ ಎಂದರೆ ಸಾಕ್ಷಿ ಆರೋಪಿ ಮನೆಯಲ್ಲಿರಲಿಲ್ಲ. ಆರೋಪಿ ಯಾವುದೆ ತಪ್ಪು ಮಾಡದ ಕಾರಣ ನಾವು ಅವಳನ್ನು ಬಂಧಿಸಿಲ್ಲ ಎಂದರೆ ಸರಿಯಲ್ಲ.

ನಾವು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಕೊಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಯನ್ನು ಪಂಚರನ್ನಾಗಿ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಮುದ್ದೆಮಾಲಗಳ ರೀತಿ ಹೋಲುವ ಮದ್ಯದ ಪೌಚ ಮತ್ತು ಬಾಟಲಿಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ